

# ಜರ್ಮನಿಯ ಮಕುಟ ಬುರ್ಗ್‌ಹೌಸೆನ್

ಕ್ಯಾಸೆಲ್ ಎಂದಾಕ್ಷಣ ಮೊದಲಿಗೆ ಜರ್ಮನಿ, ನಂತರ ಯೂರೋಪ್ ನೆನಪಾಗುತ್ತದೆ. ಪ್ರಾಚೀನ ಹಾಗೂ ಸಮೃದ್ಧ ಇತಿಹಾಸ ಇರುವುದರಿಂದಾಗಿ ಯೂರೋಪ್‌ನ ಹಲವು ದೇಶಗಳಲ್ಲಿ ಕ್ಯಾಸೆಲ್ ಸಾಮಾನ್ಯ. ಕ್ಯಾಸೆಲ್‌ಗಳೂ ಅರಮನೆಗಳೇ. ಆದರೂ ವ್ಯತ್ಯಾಸವಿದೆ. ಅವು ತಮ್ಮೊಳಗೆ ರಾಜರ ವಾಸಸ್ಥಾನವನ್ನು ಹೊಂದಿದ್ದು, ಹೊರಗಡೆ ಅಭೇದ್ಯವಾದ ರಕ್ಷಣಾ ಕೋಟೆಯನ್ನು ಹೊಂದಿರುತ್ತವೆ. ತಮ್ಮ ಸರಹದ್ದಿನೊಳಗೆ ಸೇನಾಪಡೆ, ಸಹಾಯಕರ ಮನೆಗಳು, ಕುದುರೆಲಾಯ ಎಲ್ಲವನ್ನೂ ಹೊಂದಿರುತ್ತವೆ. ಕೋಟೆಗೆ ಭದ್ರವಾದ ದಿಡ್ಡಿ ಬಾಗಿಲು, ಬಾಗಿಲಾಚೆ ನೀರಿನ ಕಂದಕ (ಮೋಟ್) – ಹೀಗೆ ಏಳುಸುತ್ತಿನ ಕೋಟೆಯಂತಹ ನಿರ್ಮಾಣ.

'ಬುರ್ಗ್‌ಹೌಸೆನ್' ಪರ್ವತದ ಮೇಲಣ ಕ್ಯಾಸಲ್. ಗಿನ್ನೆಸ್ ವರ್ಲ್ಡ್ ರೆಕಾರ್ಡ್‌ನಲ್ಲಿ ಸೇರ್ಪಡೆಯಾಗಿರುವ ಇದು, ವಿಶ್ವದ ಅತಿ ಉದ್ದದ ಕ್ಯಾಸೆಲ್ ಎನ್ನುವ ಹಿರಿಮೆ ಹೊಂದಿದೆ. 3448 ಅಡಿ ಉದ್ದ ಇರುವ 'ಬುರ್ಗ್‌ಹೌಸೆನ್'ಗಿಂತಲೂ ವೈಭವೋಪೇತ ಕ್ಯಾಸೆಲ್‌ಗಳು ಜರ್ಮನಿ, ಯೂರೋಪ್‌ನಲ್ಲಿವೆ. ಆದರೆ, ಇದು ತನ್ನ ಗೋಥಿಕ್ ಆರ್ಟ್‌ನೋವಾ ಶೈಲಿಯಿಂದ, ಅತಿ ಉದ್ದದ ನಿರ್ಮಾಣದಿಂದ, ಮಧ್ಯಕಾಲೀನ ಯುಗದ ಆರಂಭದಲ್ಲೇ ಇದ್ದ ಹೆಗ್ಗಳಿಕೆಯಿಂದ ಪ್ರಖ್ಯಾತವಾಗಿದೆ. ಕ್ರಿ.ಶ. 600ರಲ್ಲೇ ಇಲ್ಲೊಂದು ಮರದ ಕೋಟೆ ಇತ್ತೆನ್ನುತ್ತದೆ ಇತಿಹಾಸ.

ಆಸ್ಟ್ರಿಯಾ ದೇಶದ 'ಸಾಲ್ಜೆಕ್ ನದಿ' ಮತ್ತು ಜರ್ಮನಿಯ 'ವ್ಹೋರ್ಸೇ' ಸರೋವರದ ನಡುವಿನಲ್ಲಿರುವ ಪರ್ವತ ಶಿಖರದ ತುದಿಯಲ್ಲಿದೆ 'ಬುರ್ಗ್‌ಹೌಸೆನ್ ಕ್ಯಾಸೆಲ್'. ಜರ್ಮನಿಯ 'ಬವೇರಿಯಾ' ಪ್ರಾಂತ್ಯದಲ್ಲಿರುವ ಈ ಕ್ಯಾಸೆಲ್‌ಗೆ, ಮ್ಯೂನಿಕ್ ನಗರದಿಂದ 2 ಗಂಟೆ ರಸ್ತೆ ಪ್ರಯಾಣ. ಈ ಕ್ಯಾಸೆಲ್, ಬವೇರಿಯಾದ 'ಬುರ್ಗ್‌ಹೌಸೆನ್' ನಗರಕ್ಕೆ ಅಭಿಮುಖವಾಗಿದೆ. ಆ ಕಡೆ ಆಸ್ಟ್ರಿಯಾ, ಈ ಕಡೆ ಜರ್ಮನಿ. ನಿಜಕ್ಕೂ ಈ ತಾಣ ಅದೆಷ್ಟು ಮನೋಹರ ಎಂದರೆ, ವಾರಗಟ್ಟಲೆ ಅಲ್ಲಿಯೇ ಉಳಿದು ಸುತ್ತಾಡುವ ಅದಮ್ಯ ಮೋಹ ಹುಟ್ಟಿಸುತ್ತದೆ. ಪರ್ವತದ ಮೇಲಿನ ತಂಪು ಗಾಳಿಗೆ ಮೈಮನಗಳೊಡ್ಡಿ, ಕೆಳಗೆ ಕನ್ನಡಿಯಂತೆ ಫಳಫಳಿಸಿ ಹರಿಯುವ ನೀಲ ಸರೋವರವನ್ನು

